ಸಾಕ್ಷಿಯನ್ನು ದಿಃ 21-03-2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಎಸ್ ಜಿ ಎಮ್ ವಕೀಲರಿಂದಃ

ಈ ದಿನ ನನ್ನ ಜೊತೆ 5 ನೇ ವಾದಿ ಹಾಜರಿದ್ದು ಅವರ ಜೊತೆ 7 ನೇ ವಾದಿಯ ಮಗಳು ಸಹ ಹಾಜರಿರುತ್ತಾರೆ. 1 ನೇ ವಾದಿಗೆ 3 ಜನ ಮಕ್ಕಳಿದ್ದು ಅವರ ಹೆಸರು ಸಂಧ್ಯಾ , ಸಂದೀಪ್ ಮತ್ತು ನಂದಾ ಎಂದು ಇರುತ್ತದೆ. ನನಗೆ ಸಹ 3 ಜನ ಮಕ್ಕಳಿದ್ದು ನನ್ನ ಮಕ್ಕಳ ಪೈಕಿ ಕೃತಿ ಶೇಣವ ಇವರನ್ನು 4 ನೇ ವಾದಿಯನ್ನಾಗಿ ಮತ್ತು ನನ್ನ ಇನ್ನಿಬ್ಬರು ಮಕ್ಕಳಾದ ದೇವಿಪ್ರಸಾದ್ ಮತ್ತ ಕೃಪಾ ಇವರನ್ನು ಪ್ರತಿವಾದಿ ಸಂ.2 ಮತ್ತು 3 ರನ್ನಾಗಿ ಮಾಡಿರುವ ಕಾರಣವೇನು ಎಂದರೆ ಸಾಕ್ಷಿದಾರರು ತಾನು ಆ ರೀತಿ ಮಾಡಿಲ್ಲ ಎಂದು ನುಡಿಯುತ್ತಾರೆ, ನಾನು ನನ್ನ ಮಕ್ಕಳನ್ನು ನಮ ಜೊತೆ ಬೇಡ ಸಿ ಪ್ರತಿವಾದಿಯನ್ನಾಗಿ ಕಾಣಿಸಿ ಎಂದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರಲಿಲ್ಲ. ನನ್ನ ಮತ್ತು 2 ಹಾಗೂ 3 ನೇ ಪ್ರತಿವಾದಿಯ ನಡುವೆ ಒಳ್ಳೆಯ ಬಾಂಧವ್ಯ ಇದೆ, ನಾನು ನಮ್ಮ ವಕೀಲರಿಗೆ ನನ್ನ ಎಲ್ಲಾ ಮಕ್ಕಳನ್ನು ವಾದಿಯನ್ನಾಗಿಸುವಂತೆ ಕೇಳಿದ್ದೆ. ನನ್ನ ಮತ್ತು 2 ಹಾಗೂ 3 ನೇ ಪ್ರತಿವಾದಿಯ ನಡುವೆ ಯಾವುದೇ ಜಗಳ ಇಲ್ಲ, ನಮ್ಮ ಬಿನ್ನಾಭಿಪ್ರಾಯ 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳಾದ 4 ಮತ್ತು 5 ನೇ ಪ್ರತಿವಾದಿಗಳ ಜೊತೆ ಎಂದರೆ ಸರಿ. ನಮಗೆ ಮತ್ತು 4 ಹಾಗೂ 5 ನೇ ಪ್ರತಿವಾದಿಗಳ ನಡುವೆ ಭಿನ್ನಾಬಿಪ್ರಾಯದ ಕಾರಣ ಅವರು ಕುಸುಮಾರವರ ಆಸ್ತಿಯನ್ನು ಕೇಳುತ್ತಿರುವುದು. ನಮ್ಮ ನಡುವಿನ ಭಿನ್ನಾಬಿಪ್ರಾಯದ ಕಾರಣ 4 ಹಾಗೂ 5 ನೇ ಪ್ರತಿವಾದಿಗೆ ಆಗಿರುವ ವೀಲುನಾಮೆ ಎಂದರೆ ಸಾಕ್ಷಿದಾರರು ವೀಲುನಾಮೆ ತಮ್ಮ ಗಮನಕ್ಕೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನಮಗೆ ಸದರಿ ವೀಲುನಾಮೆ ನಮ್ಮ ಗಮನಕ್ಕೆ ಬಂದಿದ್ದು ಕುಸುಮಾರವರು ತೀರಿಹೋದ ನಂತರ. ಅವರು ತೀರಿಹೋದ 1 ತಿಂಗಳ ನಂತರ ನಮ್ಮ ಗಮನಕ್ಕೆ ಅದು ಬಂದಿರುತ್ತದೆ, ನಾವು ಆ ವಿಚಾರವನ್ನು ವಕೀಲರಿಗೆ ತಿಳಿಸಿದ್ದೇವೆ, ನಮಗೆ ಸದರಿ ವೀಲುನಾಮೆಯ ವಿಚಾರ 1 ನೇ ವಾದಿ ಹೇಳಿದ್ದರಿಂದ ತಿಳಿದುಬಂದಿರುತ್ತದೆ. 1 ನೇ ವಾದಿಗೆ 1 ನೇ ಪ್ರತಿವಾದಿ ತಿಳಿಸಿರಬಹುದು. ಕುಸುಮಾ ತೀರಿಹೋದ 1 ತಿಂಗಳ ನಂತರ ವೀಲುನಾಮೆ ಬಗ್ಗೆ 1 ನೇ ವಾದಿ ನನಗೆ ಫೋನ್ ಮುಖಾಂತರ ತಿಳಿಸಿದ್ದರು. ಈ ವಿಚಾರವನ್ನು ನಾನು ಈ ಕೇಸನ್ನು ತಯಾರು ಮಾಡುವಾಗ ನಮ್ಮ ವಕೀಲರಿಗೆ ತಿಳಿಸಿದ್ದೇನೆ. ವೀಲುನಾಮೆಯ ಬಗ್ಗೆ ತಿಳಿದ ನಂತರ ನಾವು ಇದರ ಬಗ್ಗೆ 1 ನೇ ಪ್ರತಿವಾದಿಯನ್ನು ವಿಚಾರಿಸಿದ್ದೇವೆ. ನಾವು 1 ನೇ

ಪ್ರತಿವಾದಿಯನ್ನು ಕುಸುವಾ ರವರು ತೀರಿಹೋದ ಒಂದು ತಿಂಗಳ ನಂತರ ಫೋನ್ ನಲ್ಲಿ ಇದರ ಬಗ್ಗೆ ವಿಚಾರಿಸಿದ್ದೇವೆ. ಅವರು ಆಗ ವೀಲುನಾಮೆ ಮಾಡಿರುವ ವಿಚಾರ ಹೇಳಿದರು, ವೀಲುನಾಮೆಯನ್ನು ಎಲ್ಲಿ ಬರೆದಿದ್ದು ಎಂದು ನಾವು ಕೇಳಿಲ್ಲ. ನಾವು ವೀಲುನಾಮೆಯನ್ನು ರದ್ದುಗೊಳಿಸಬೇಕು ಮತ್ತು ಆಸ್ತಿಗಳು 1 ನೇ ಪ್ರತಿವಾದಿಯ ಮಕ್ಕಳಿಗೇ ಹೋಗಬಾರದು ಎಂದು ಈ ದಾವೆಯನ್ನು ಸಲ್ಲಿಸಿದ್ದೇವೆ. ನಾವು ಸದರಿ ವೀಲುನಾಮೆಯ ಪ್ರತಿಯನ್ನು ವಕೀಲರ ಮುಲಕ ನೊಂದಣಿ ಕಚೇರಿಯಿಂದ ಪಡೆದಿದ್ದೇವೆ. ಸದರಿ ವೀಲುನಾಮೆಯ ಪ್ರತಿಯನ್ನು ನಮ್ಮ ಈ ದಾವೆಯ ವಕೀಲರಿಗೆ ದಾವೆಯನ್ನು ತಯಾರಿಸಲು ಕೊಟ್ಟಿದ್ದೇವೆ. ನಾವು ವೀಲುನಾಮೆಯ ಬಗ್ಗೆ ತಿಳಿದುಕೊಂಡಿದ್ದು ಅದರಲ್ಲಿ 4 ಮತ್ತು 5 ನೇ ಪ್ರತಿವಾದಿಗಳಿಗೆ ಕುಸುಮಾರವರ ಆಸ್ತಿಗಳು ಎಂದು ಬರೆಯಲಾಗಿತ್ತು. ವೀಲುನಾಮೆಯಲ್ಲಿ ತೋರಿಸಿದ ಆಸ್ತಿಗಳನ್ನೇ ಈ ದಾವೆಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ವೀಲುನಾಮೆಗೆ ಯಾರ್ಯಾರು ಸಹಿ ಹಾಕಿದ್ದಾರೆ ಎಂದು ಪ್ರತಿವಾದಿ ಪರ ವಕೀಲರು ವೀಲುನಾಮೆಯನ್ನು ತೋರಿಸಿಕೇಳಿದಾಗ ಗಣೇಶ್ ಪ್ರಭು ಮತ್ತು ಹೈದರಾಲಿ ಎಂಬುವವರು ಸಾಕ್ಷಿಯಾಗಿ ಸಹಿ ಹಾಕಿದ್ದಾರೆಂದು ನುಡಿಯುತ್ತಾರೆ.ನಾವು ವೀಲುನಾಮೆಯ ದೃಢೀಕೃತ ನಕಲನ್ನು ಪಡೆದುಕೊಂಡಾಗ ಅದರಲ್ಲಿರುವ ಅಂಶಗಳನ್ನು ನಾವು ನೋಡಿರಲಿಲ್ಲ ನಾವು ವಕೀಲರಿಂದ ಅದರ ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಸದರಿ ವಕೀಲರು ಈ ದಾವೆಯಲ್ಲಿರುವ ನಮ್ಮ ವಕೀಲರಾದ ನಾಗೇಶ್ ಶರ್ಮರವರು. ನಾವು ಪಡೆದುಕೊಂಡಿದ್ದ ವೀಲುನಾಮೆಯ ದೃಢೀಕೃತ ನಕಲನ್ನು ಸಹ ದಾವೆಯಲ್ಲಿ ಹಾಜರುಪಡಿಸುವಂತೆ ನಮ್ಮ ವಕೀಲರಿಗೆ ತಿಳಿಸಿದ್ದೆವು, ವೀಲುನಾಮೆಯ ನಕಲನ್ನು ನಮ್ಮ ವಕೀಲರು ಈ ದಾವೆಯಲ್ಲಿ ಹಾಜರುಪಡಿಸಿಲ್ಲದೇ ಇರುವ ಕಾರಣವೇನು ಎಂದರೆ ನನಗೆ ಗೊತ್ತಿಲ್ಲ, ವೀಲುನಾಮೆಯನ್ನು ತಯಾರಿಸಿದ ವಕೀಲರು ಯಾರು ಎಂದು ನಾವು ನಮ್ಮ ವಕೀಲರನ್ನು ಕೇಳಿಲ್ಲ. ಸಾಕ್ಷಿದಾರರಿಗೆ ಒಂದು ಫೊಟೋ ಪ್ರತಿಯನ್ನು ತೋರಿಸಿದಾಗ ಅದರಲ್ಲಿರುವ ವ್ಯಕ್ತಿಗಳು 1 ನೇ ವಾದಿ ಮತ್ತು ಅವರ ಕುಟುಂಬದವರು ಇರಬಹುದೆಂದು ಒಪ್ಪಿದ್ದು ಅದನ್ನು ನಿಡಿ.9 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಮತ್ತೊಂದು ಫೊಟೋದ ಪ್ರತಿಯನ್ನು ತೋರಿಸಿದಾಗ ಅದರಲ್ಲಿ ಕುಸುಮಾ ಮತ್ತು 4 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಇರುತ್ತಾರೆಂದು ಒಪ್ಪಿದ್ದು ಅದನ್ನು ನಿಡಿ.10 ಎಂದು ಗುರುತಿಸಲಾಯಿತು. ಮತ್ತೊಂದು ಫೊಟೋದ ಪ್ರತಿಯನ್ನು ತೋರಿಸಿದಾಗ ಅದರಲ್ಲಿ ಕುಸುಮಾ ಮತ್ತು ಅವರ

ಜೊತೆ 4 ಮತ್ತು 5 ನೇ ಪ್ರತಿವಾದಿಗಳು ಇರುವುದಕಾಗಿ ಒಪ್ಪಿದ್ದು ಅದನ್ನು ನಿಡಿ-11 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಮತ್ತೊಂದು ಫೊಟೋದ ಪ್ರತಿಯನ್ನು ತೋರಿಸಿದಾಗ ಅದರಲ್ಲಿ ಕುಸುಮಾರವರು ಇರುವುದನ್ನು ಒಪ್ಪಿದ್ದು ಅದನ್ನು ನಿಡಿ-12 ಎಂದು ಗುರುತಿಸಲಾಯಿತು. ಮತ್ತೊಂದು ಫೆಫೊಟೋದ ಪ್ರತಿಯನ್ನು ತೋರಿಸಿದಾಗ ಅದರಲ್ಲಿ ಕುಸುಮಾ , 1 ನೇ ಪ್ರತಿವಾದಿ , 5 ನೇ ಪ್ರತಿವಾದಿ ಮತ್ತು ಆಕೇಯ ಮಗಳು ಇದ್ದಾರೆಂದು ಒಪ್ಪಿದ್ದು ಅದನ್ನು ನಿಡಿ-13 ಎಂದು ಗುರುತಿಸಲಾಯಿತು .

ನನ್ನ 3 ಜನ ಮಕ್ಕಳು ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. 4 ನೇ ವಾದಿ ಮಂಗಳೂರಿನಲ್ಲಿ ಮಾಸ್ಟರ್ ಆಫ್ ಟೂರಿಸಂ ಪದವಿಯನ್ನು ಕೋಣಾಜೆಯಲ್ಲಿ ಮಾಡಿದ್ದರು. ಆಗ ಅವರು ಕಾಲೀಜಿನ ಹಾಸ್ಟೆಲ್ಲಲ್ಲಿದ್ದರು. 4 ನೇ ಪ್ರತಿವಾದಿ ಸಹ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದ್ದರು. 4 ನೇ ವಾದಿ ಮತ್ತು ಪ್ರತಿವಾದಿ ಒಂದೇ ಸಮಯದಲ್ಲಿ ಈ ಮೇಲೆ ಹೇಳಿದ ವಿದ್ಯಾಭ್ಯಾಸ ಮಾಡಿದ್ದರು ಎಂದರೆ ಸರಿ. 4 ನೇ ಪ್ರತಿವಾದಿ ಕುಸುಮಾ ಶೆಟ್ಟಿ ರವರ ಮನೆಯಿಂದ ತಮ್ಮ ಕಾಲೇಜಿಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದಮರಿದು 1 ನೇ ಪ್ರತಿವಾದಿಯ ಮನೆ ಮಂಗಳೂರಿನ ಅಶೋಕ ನಗರದಲ್ಲಿತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲ ಕುಸುಮಾರವರ ಮನೆ ಮಗಂಳೂರಿನ ದೇರಳಕಟ್ಟೆಯಲ್ಲಿತ್ತು ಎಂದರೆ ಸರಿ. ದೇರಳಕಟ್ಟೆಯಿಂದ ಮಂಗಳೂರು ವಿಶ್ವವಿದ್ಯಾನಿಲಯ ಸುಮಾರು 2 ಕಿ . ಮೀ. ಅಂತರದಲ್ಲಿದೆ ಎಂದರೆ ಸಾಕ್ಷಿದಾರರು ನಿರಾಕರಿಸಿ ಸುಮಾರು 4 ಕಿ ಮೀ ಅಂತರದಲ್ಲಿದೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯು ಕುಸುಮ ಶೆಟ್ಟಿರವರ ಮನೆಯಲ್ಲಿಯೇ ಉಳಿದು ತಮ್ಮ ವಿದ್ಯಾಭ್ಯಾಸ ಮುಗಿಸಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಕುಸುಮಾ ಶೆಟ್ಟಿಯವರ ಬಗ್ಗೆ ಕಾಳಜಿ ವಹಿಸಿ ಅವರ ಎಲ್ಲಾ ಕೆಲಸಗಳನ್ನು ಮಾಡಿಕೊಡುತ್ತಿದ್ದರು ಎಂದರೆ ಸರಿಯಲ್ಲ, 5 ನೇ ಪ್ರತಿವಾದಿ ಸಹ ಕುಸುಮ ಶೆಟ್ಟಿರವರ ಮನೆಯಲ್ಲಿಯೇ ವಾಸವಾಗಿದ್ದು ಅಲ್ಲಿಯೇ ತಮ್ಮ ವಿದ್ಯಾಭ್ಯಾಸ ಮುಗಿಸಿದ್ದರು ಎಂದರೆ ಸರಿಯಲ್ಲ.

(ಈ ಹಂತದಲ್ಲ ಮುಂದುವರಿದ ಪಾಟೀಸವಾಲಿಗೆ ).

ಕಾಲಾವಕಾಶ ಕೋರಿದ್ದು : ಕಾಲಾವಕಾಶ ನೀಡಲಾಯಿತು.

**(**ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ.ಹೇ.ಕೇ.ಸ.ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು, ದ.ಕ.